ತಾರೀಖು 22ನೇ ಜನವರೀ 1884.

ನಂ. 305.—ಕ್ರಿಮಿನಲ್ ಪ್ರೊಸಿಜ್ಯೂರ್-ಕೋಡಿನ 23ನೇ ಸೆಕ್ಷನಿಗನುಗುಣವಾಗಿ ಯಳಂದೂರು ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಟಿ. ಕೃಷ್ಣರಾಯರಿಗೆ ಇದರಡೀಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

(1.) ಲಾಸ್ ವಿಚಾರಣೆ ಬಗ್ಯೆ ಅಧಿಕಾರ (ಸೆಕ್ಷರ್ 135.)

(2.) ತಕಸೀರುಗಳ ಬಾಬತು ಫಿರ್ಯಾದುಗಳನ್ನ ದಾಖಲ್ಮಾಡಿಕೊಳ್ಳುವದಕ್ಕೂ ಮತ್ತು ಪೊಲೀಸ್ ರಿಪೋರ್ಟುಗಳನ್ನು ತೆಗದುಕೊಳ್ಳುವದಕ್ಕೂ ಅಧಿಕಾರ (ಸೆಕ್ಷರ್ 141.)

(3.) ನಿರೋಧ ವಗೈರೇಗಳನ್ನ ಅಡ್ಡೀ ಮಾಡುವಂತೆ ಹುಕ್ಕುಂ ಕೊಡುವದಕ್ಕೆ ಅಧಿಕಾರ (ಸೆಕ್ಷರ್ 518.)

(4.) ಬಾರ್ ಬಾರ್ ಹೇಸಿಗೆ ಮಾಡುವದನ್ನ ನಿಷೇಧಿಸಿ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ (ಸೆಕ್ಷರ್ 519.)

2. ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 335ನೇ ಸೆಕ್ಷನಿಗನುಗುಣವಾಗಿ ಟಿ. ಕೃಷ್ಣರಾಯರು ಫಿರ್ಯಾದಿಗಳ ಮತ್ತು ಸಾಕ್ಷಿಗಳ ಸಾಕ್ಷ್ಯತ್ವವನ್ನ ಕನ್ನಡ ಭಾಷೆಯಲ್ಲಿ ಸ್ವದಸ್ತೂರು ತೆಗದುಕೊಳ್ಳುವಂತೆ ಹುಕ್ಕುಂ ಮಾಡಲ್ಪಟ್ಟಿರುತ್ತಾರೆ.

ನಂ. 306.—ಶಿವಮೊಗ್ಗಾ ಡಿಸ್ಟ್ರಿಕ್ಟು ನಗರ ತಾಲ್ಲೂಕು ಅಮಲ್ದಾರ್ ಲಾಜರಸ್ ಡುಮಿಂಗೊ ಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಎಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ತಾಲ್ಲೂಕು ಶಿರಸ್ತೇದಾರ್ ಬಾಬುರಾಯರು, ಲಾಜರಸ್ ಡುಮಿಂಗೊಯವರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ವರಿಗೆ, ನಗರ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ತಾರೀಖು 23ನೇ ಜನವರೀ 1884.

ನಂ. 307—ಬೆಂಗಳೂರು ಪಹರ್ ಮ್ಯುನಿಸಿಪಲ್ ಇಲಾಖಾ ಅಸ್ಸಿಸ್ಟೆಂಟ್ ವ ಕಲೆಕ್ಟರ್ ಪಿ. ಸ್ವಾಮಿದಾಸಯ್ಯಳ್ಳಿ ಯವರಿಗೆ, ಅವರು ಮೂ ಉಪಯೋಗಿಸಿಕ್ಕೊಂಡ ತಾರೀಖು ಲಾಗಾಯತು ಎಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 29ನೇ ಜನವರೀ 1884.

ನಂ. 308.—1879ನೇ ಇಸವಿ 1ನೇ ನಂಬರ್ ಇಂಡಿಯನ್ ಸ್ಟ್ಯಾಂಪ್ ಆಕ್ಟನ್ನು ಮೈಸೂರು ದೇಶಕ್ಕೆ ಜಾರಿಗೆ ತಂದ ಇಂಪ್ಯೀರಿಯಲ್ ಗವರ್ನಮೆಂಟಿನವರ 1879ನೇ ಇಸವಿ 22ನೇ ಮೇ ಮಾಹೆ 99. I. J. ನಂಬರ್‌ವುಳ್ಳ ಇಸ್ತಿಹಾರ್‌ನಾಮೆಯ (ಸಿ) ಕ್ಲಾಜ್ ಅನುಸರಿಸಿ ಶ್ರೀಮನ್ ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ, ಎಂದು ಡಿಸ್ಟ್ರಿಕ್ಟಿನ ಸಬ್ ಡಿವಿಜ್ ಚಾರ್ಜಿನಲ್ಲಿರತಕ್ಕ ಆಫೀಸರರು, ಸದರೀ ಆಕ್ಟಿನ ಅರ್ಥ ಪ್ರಕಾರ ಎಬ್ಬ ಕಲೆಕ್ಟರೆಂದು ಎಣಿಸಲ್ಪಡತಕ್ಕದ್ದು.

ನಂ. 309.—ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿ ತಾಲ್ಲೂಕು ಅಮಲ್ದಾರ್ ಸಿ. ಕೃಷ್ಣರಾಯರಿಗೆ ಮಾಹೆ ಮಜಕೂರ್ 4ನೇ ಮರ್ಕುಂ, ಯಾ ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು 3 ವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 310.—ತುಮಕೂರು ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾದ ನಾಗೇಶ್ವರಯ್ಯನವರಿಗೆ, ಅವರು ಸದರೀ ತಾಲ್ಲೂಕು ಚಾರ್ಜಿನಲ್ಲಿರುವ ಕಾಲದೆಲ್ಲಿ ಫಿರ್ಯಾದಿಗಳ ವ ಸಾಕ್ಷಿಗಾರರ ಸಾಕ್ಷತ್ವವನ್ನು ಕನ್ನಡ ಭಾಷೆಯಲ್ಲಿ ಸ್ವದಸ್ತೂರು ತೆಗದುಕೊಳ್ಳುವಂತೆ ಹುಕ್ಕುಂ ಕೊಡಲ್ಪಟ್ಟಿರುತ್ತೆ.

ತಾರೀಖು 5ನೇ ಫಿಬ್ರವರೀ 1884.

ನಂ. 311.—ಇದರಿಂದ ಪ್ರಕಟಿಸಲ್ಪಡುವದೇನಂದರೆ, ಕಡೂರು ಡಿಸ್ಟ್ರಿಕ್ಟು ಪೈತ್ಪತ್ತೀ ಬಾಬತು ಇದರಡಿ ಕಂಡ ನಾಟೂಗಳು ಅವುಗಳ ಚಾರ್ಜ್‌ವುಳ್ಳ ಡಿಪ್ಯೂಟಿ ಕಮಿಷನರಿಂದ, ಅಥವಾ ಸದರೀ ಬಗ್ಯೆ ಅಹೆರು ನೇಮಿಸಬಹುದಾದ ಇತರ ಆಫಿಸರರಿಂದ ಈ ಕೆಳಗೆ ವಿವರಿಸಲ್ಪಟ್ಟ ತಾರೀಖಿನಲ್ಲಿಯೂ, ಸ್ಥಳದೊಳಗೂ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ಹಾಕುವ ಸ್ಥಳದ ಹೆಸರು.	ಹರಾಜ್ ಮಾಡುವ ತಾರೀಖು.	ತೇಗದಮರ.	ಮಾರಿಕೊಳ್ಳಲ್ಪಟ್ಟದ್ದು.	ಮಾರಿಕೊಳ್ಳಲ್ಪಡದೆ ಇರುವದು.	ಕೂಚಗಳು.
ಚಿಕ್ಕಮಗಳೂರು ಕೋಠಿ.	1884ನೇ ಫಿಬ್ರವರೀ 21ನೇ ಮಂಗಳವಾರ.	22	10	37	400

ಜುಮ್ಲಾ ಹೆಚ್ಚು ಕಡಮೆ—469

ಹರ್ರಾಜಿನ ಷರತ್ತುಗಳು—ಸ್ರ 1873ನೇ ಜೂನ್ 12ನೇ ಮಂಗಳವಾರ 20ನೇ ನಂಬರ್ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ ಇರತಕ್ಕದ್ದು ಮತ್ತು ಇವುಗಳು ಹರಾಜ್ ಕಾಲದಲ್ಲಿ ಪ್ರಕಟವಾಗಿ ಓದಲ್ಪಡುವದು.

ತಾರೀಖು 21ನೇ ಮಾರ್ಚೀ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ನಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ನಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

"ಬಮೋಜೀಬ್ ಹುಕ್ಕುಂ"

ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.

ತಾರೀಖು 22ನೇ ಮಾರ್ಚೀ 1883

ನಂ. 85.—ದೀವಾನರವರು ತಮ್ಮ ವಾಸಸ್ಥಾನದಲ್ಲಿ ಪ್ರತಿ ಬುಧವಾರ ಮಧ್ಯಾನ್ನ 12 ಘಂಟೆಯಲ್ಲೂ, ಗುರುವಾರಗಳಲ್ಲಿ ಬೆಳ್ಳಿಗ್ಗೆ 8 ಘಂಟೆಯಲ್ಲೂ, ತಮ್ಮ ಭೇಟೀ ತೆಗದುಕೊಳ್ಳಲಪೇಕ್ಷಿಸತಕ್ಕವರಿಗೆ ಭೇಟೀ ಕೊಡುವರು. ಅವರು ತಮ್ಮ ಕಾರ್ಡ್ ಚೀಟಿಗಳನ್ನು ದೀವಾನರವರ ಪ್ರೈವೇಟ್ ಸೆಕ್ರಟೇರಿಯವರಿಗೆ ಹಿಂದಿನ ದಿನದಲ್ಲಿ ಕಳುಹಿಸತಕ್ಕದ್ದು.

"ಬಮೋಜೀಬ್ ಹುಕ್ಕುಂ,"

ಸಿ. ರಾಘವಾಚಾರ್ಲು,
ಪ್ರೈವೇಟ್ ಸೆಕ್ರಟೇರಿ.